**ಪಿ.ಡಬ್ಲ್ಯೂ-1**

ದಿನಾಂಕ:**04-11-2024** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಮುಂದುವರೆದ ಮುಖ್ಯ ವಿಚಾರಣೆ: ಶ್ರೀ ಕೆ.ಎ.ಆರ್. ವಕೀಲರಿಂದ:-

Ex.P-1:- Certified copy of Plaint and other documents.

Ex.P-2:-Certified copy of order sheet in Senior citizen petition No.86/22-23 and other enclosures.

Ex.P-3:-Certified copy of affidavit verifying the complaint filed before the disciplinary committee of Karnataka State bar counsel.

Ex.P-4:-Receipt for having paid fee to the Karnataka State bar counsel. .

Ex.P-5:- G-Tree.

Ex.P-6:- Copy application with acknowledgment given to Thasildar, Arsikere.

Ex.P-7:- S.P.A.

ನನ್ನ ಮಾಗಣಿಯ ಪ್ರಕಾರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು: ಶ್ರೀ ಎನ್.ಎಸ್.ಎಸ್. ವಕೀಲರಿಂದ:-

ನನಗೆ ಅಷ್ಟೊಂದು ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು **6** ನೇ ತರಗತಿಯವರೆಗೆ ಓದಿದ್ದೇನೆ. **2** ರಿಂದ **4** ನೇ ಮೇಲ್ಮನವಿದಾರರು ನಮ್ಮ ಮಕ್ಕಳಿದ್ದು ಅವರು ನಮ್ಮ ಜೊತೆಗೆ ಚೆನ್ನಾಗಿದ್ದಾರೆ. ಎದುರುದಾರರು ಕೂಡ ನನ್ನ ಮಗ. ಈ ಪ್ರಕರಣ ದಾಖಲಾದ ಮೇಲೆ ಆತ ನಮ್ಮ ಜೊತೆ ಚೆನ್ನಾಗಿಲ್ಲ. ಓ.ಎ.**299/2022** ನ್ನು ಎದುರುದಾರರೇ ಹಾಕಿದ್ದರು. ಅಲ್ಲಿ ನಾವು ರಾಜಿಯಾಗಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ನಾವು ನಮ್ಮ ವಕೀಲರ ಮೂಲಕ ಹಾಜರಾಗಿ ಖುದ್ದಾಗಿ ಸದರಿ ಎದುರುದಾರರ ಜೊತೆ ರಾಜಿಯಾಗಿ ರಾಜಿ ಅರ್ಜಿಯನ್ನು ಸಲ್ಲಿಸಿದ್ದು ಅದರಂತೆ

ಅದು ಡಿಕ್ರಿಯಾಗಿದ್ದರೂ ಈಗ ಆ ನಡಾವಳಿ ಬಗ್ಗೆ ಸುಳ್ಳು ವಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಒತ್ತಾಯ ಪೂರ್ವಕವಾಗಿ ಎದುರುದಾರರೇ ನಮ್ಮ ಸಹಿ ಮಾಡಿಸಿಕೊಂಡಿರುತ್ತಾರೆ. ನಾನು ಚೆನ್ನಾಗಿದ್ದೇನೆ ಆದರೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನಾಗಲೀ ನನ್ನ ಹೆಣ್ಣು ಮಕ್ಕಳಾಗಲೀ ಸದರಿ ರಾಜಿ ಡಿಕ್ರಿಯನ್ನು ಪ್ರಶ್ನಿಸಿ ಎಲ್ಲಿಯೂ ದಾವೆ ಸಲ್ಲಿಸಿಲ್ಲ. ಈ ಮೇಲ್ಮನವಿ ಸಲ್ಲಿಸುವ ಮುಂಚೆ ಎ.ಸಿ. ನ್ಯಾಯಾಲಯಲ್ಲಿ ಅರ್ಜಿ ಸಲ್ಲಿಸಿದ್ದೆವು. ಅಲ್ಲಿ ಆದೇಶ ಆಗಿದ್ದು ಎದುರುದಾರರು ನನಗೆ ತಿಂಗಳಿಗೆ **10** ಸಾವಿರ ಕೊಡಬೇಕೆಂದು ನಿರ್ದೇಶಿಸಲಾಗಿತ್ತು. ಆದರೆ ಎದುರುದಾರರು **2** ತಿಂಗಳು ಮಾತ್ರ ಆ ಹಣ ಕೊಟ್ಟಿರುತ್ತಾರೆ. ಆ ದಾವೆಯಲ್ಲಿ ಆಗ ಡಿಕ್ರಿಯಂತೆ ನನ್ನ ಹೆಣ್ಣು ಮಕ್ಕಳು ಭಾಗ ಪಡೆದು ಅವರ ಆಸ್ತಿಗಳನ್ನು ಈಗಾಗಲೇ ಮಾರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳ ಮಾತನ್ನು ಕೇಳಿ ಈ ಸುಳ್ಳು ಮೇಲ್ಮನವಿ ಸಲ್ಲಿಸಿರುತ್ತೇನೆಂದರೆ ಸರಿ. ನನಗೆ ಬಿ.ಪಿ., ಶುಗರ್ ಬಿಟ್ಟು ಬೇರೆ ಗಂಭೀರ ಕಾಯಿಲೆಗಳು ಇಲ್ಲ. ನಾವು ಎಲ್ಲಾ ಮೇಲ್ಮನವಿದಾರರು ಎದುರುದಾರರೊಂದಿಗೆ ಸ್ವಖುಷಿಯಿಂದ ಯಾರದೇ ಒತ್ತಾಯ ಇಲ್ಲದೇ ಆ ದಾವೆಯಲ್ಲಿ ರಾಜಿ ಡಿಕ್ರಿಯನ್ನು ಪಡೆದುಕೊಂಡಿದ್ದರೂ ಎದುರುದಾರರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಮೇಲ್ಮನವಿಯನ್ನು ಸಲ್ಲಿಸಿ ಯಾವುದೇ ಸಕಾರಣ ಇಲ್ಲದೇ ಇದ್ದರೂ ಮಧ್ಯಂತರ ಅರ್ಜಿ**-1** ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.ದಿಃ **04-11-2024.**